17

# "ಯಾವ ಅಧಿಕಾರದಿಂದ?"

ಯೇಸು ಒಂದು ದಿನ ದೇವಾಲಯದಲ್ಲಿ ಬೋಧಿಸುತ್ತಿದ್ದಾಗ, ಮಹಾಯಾಜಕರೂ ಹಿರಿಯರೂ ಆತನ ಬಳಿಗೆ ಬಂದು, "ನೀನು ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೀ? ಈ ಅಧಿಕಾರವನ್ನು ನಿನಗೆ ಯಾರು ಕೊಟ್ಟರು?" (ಮತ್ತಾಯ 21:23) ಎಂದು ಕೇಳಿದರು. ಅವರ ಪ್ರಶ್ನೆಗೆ ಯೇಸು ಉತ್ತರ ಕೊಡಲಿಲ್ಲ; ಅವರ ಉದ್ದೇಶವು ದುಷ್ಟತನದಿಂದ ಕೂಡಿತ್ತೆಂದೂ ಆತನು ತಿಳಿದಿದ್ದನು. ಹೀಗಿದ್ದರೂ ಪ್ರಶ್ನೆಯು ಒಳ್ಳೆಯದಾಗಿದ್ದು, ಬೇರೆ ಸಂದರ್ಭಗಳಲ್ಲಿ ಯೇಸುವು ಅದಕ್ಕೆ ಉತ್ತರ ಕೊಟ್ಟನು. ತನ್ನ ಬೋಧನೆಯು ತಂದೆಯಿಂದ ಬಂದಿತೆಂದು ಆತನು ಘೋಷಿಸಿದನು.

ಇಂದು, ಪ್ರತಿಯೊಂದು ಧಾರ್ಮಿಕ ಆಚರಣೆಯನ್ನು ಕುರಿತು ಅಂಥ ಪ್ರಶ್ನೆಗಳನ್ನು ಕೇಳುವುದು ಒಳ್ಳೆಯ ಭಾವನೆಯಾಗಿದೆ. ಒಂದೇ ಒಂದು ಉತ್ತರವು ನಮ್ಮ ತಂದೆಗೆ ಮೆಚ್ಚಿಕೆಯಾಗುವ ಸಾಧ್ಯತೆಯುಳ್ಳದ್ದಾಗಿದೆ: "ಕ್ರಿಸ್ತನ ಅಧಿಕಾರದಿಂದ," ಯೇಸುವಿಗೆ "ಎಲ್ಲಾ ಅಧಿಕಾರವು" ಕೊಡಲ್ಪಟ್ಟಿದೆ (ಮತ್ತಾಯ 28:18). ಆತನು ಸಭೆಯ ಶಿರಸ್ಸಾಗಿದ್ದಾನೆ (ಎಫೆಸ 1:22, 23). ಕುಮಾರನ ಮುಖಾಂತರವಾಗಿ ದೇವರು ಇಂದು ನಮ್ಮ ಕೂಡ ಮಾತಾಡುತ್ತಾನೆ (ಇಬ್ರಿಯ 1:2). ರೂಪಾಂತರ ಸಮಯದಲ್ಲಿ "ಆತನ ಮಾತನ್ನು ಕೇಳಿರಿ!" ಎಂದು ದೇವರು ಹೇಳಿದಾಗ ಈ ಸಂಗತಿಯು ಒತ್ತಿ ಹೇಳಲ್ಪಟ್ಟಿತ್ತು (ಮತ್ತಾಯ 17:5; ಮಾರ್ಕ 9:7; ಲೂಕ 9:35).

ಕ್ರಿಸ್ತನ ಸಭೆಗಳ ಮಧ್ಯದಲ್ಲಿಯ ಆಚರಣೆಗಳನ್ನು ಕುರಿತು ಈ ಪ್ರಶ್ನೆಯು ಕೇಳಲ್ಪಡುವದಕ್ಕೆ ನಾನು ಬಹಳ ಸಂತೋಷವುಳ್ಳವನಾಗಿದ್ದೇನೆ. ಅದರಂತೆಯೇ, ಇತರರಿಗೆ ಈ ಪ್ರಶ್ನೆಯನ್ನು ಕೇಳುವದಕ್ಕೆ ನನಗೆ ಹಕ್ಕು ಇದೆಯೆಂದು ನಾನು ನಂಬುತ್ತೇನೆ: "ಯಾವ ಅಧಿಕಾರದಿಂದ ನೀವು ಈ ಸಂಗತಿಗಳನ್ನು ಮಾಡುತ್ತಿರುವಿರಿ?"

## "ಕ್ರೈಸ್ತನು" ಎಂಬ ಹೆಸರನ್ನು ಉಪಯೋಗಿಸಲು ಅಧಿಕಾರ

ಶಿಷ್ಯರು ಕ್ರೈಸ್ತರು ಎಂದು "ಕರೆಯಲ್ಪಟ್ಟರು" (ಅಪೊಸ್ತಲರ ಕೃತ್ಯ 11:26). ಈ ಹೆಸರಿನಲ್ಲಿ ದೇವರನ್ನು ಮಹಿಮೆ ಪಡಿಸಲು ಪೇತ್ರನು ಪ್ರಬೋಧಿಸಿದನು (1 ಪೇತ್ರ 4:16). ಆದುದರಿಂದ, ಇದು ದೈವಿಕ ಅಧಿಕಾರದಿಂದ ಈ ಹೆಸರನ್ನು ಧರಿಸಿಕೊಳ್ಳ ತ್ತೇವೆ. ಈಗ, ನೀವು ಧರಿಸಿಕೊಂಡಿರುವ ಹೆಸರನ್ನು ಕುರಿತು ನಾನು ಆ ಪ್ರಶ್ನೆಯನ್ನು ಕೇಳಲೇ? ಕ್ರಿಸ್ತನ ಅಧಿಕಾರದಿಂದ ನೀವು ಅದನ್ನು ಧರಿಸಿಕೊಳ್ಳುವಿರೋ? ಅದು ಪರಿಶುದ್ಧ ಬರಹಗಳಲ್ಲಿ ಎಲ್ಲಿಯಾದರೂ ಕಂಡು ಬರುವುದೋ?

## ರಕ್ಷಣೆಯ ಯೋಜನೆಯನ್ನುಬೋಧಿಸುವದಕ್ಕಾಗಿ ಅಧಿಕಾರ

ರಕ್ಷಣೆಯನ್ನು ಕುರಿತು, ಕ್ರಿಸ್ತನ ಸಭೆಗಳು ಒಬ್ಬ ವ್ಯಕ್ತಿಗೆ ಪೂರೈಸುವದಕ್ಕಾಗಿ ಮಾನವ ಭಾಗವಿದೆ ಎಂದು ಬೋಧಿಸುತ್ತವೆ. ರಕ್ಷಿಸಲ್ಪಡಲು ಬಯಸುವವನು ನಂಬಲೇ ಬೇಕು. ತನ್ನ ಪಾಪಗಳಿಗಾಗಿ ಮಾನಸಾಂತರಪಡಲೇ ಬೇಕು. ಕ್ರಿಸ್ತನಲ್ಲಿ ತನ್ನ ವಿಶ್ವಾಸವನ್ನು ಅರಿಕೆ ಮಾಡಲೇ ಬೇಕು ಮತ್ತು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮದಲ್ಲಿ ಹೂಣಿಡಲ್ಪಡ ಬೇಕು. ಅನೇಕ ವಾಕ್ಯಗಳು ಈ ಅಗತ್ಯತೆಗಳನ್ನು ಬೋಧಿಸುತ್ತವೆ (ಉದಾಹರಣೆಗಾಗಿ ನೋಡಿರಿ ಅಪೊಸ್ತಲರ ಕೃತ್ಯ 2:38 ಮತ್ತು ರೋಮಾಪುರ 10:10; KJV). ಅವೆಲ್ಲವೂ ರಕ್ಷಣೆಗಾಗಿ "ಇವೆ."

ದೇವರ ಮಕ್ಕಳಾಗುವದರಲ್ಲಿ ಈ ಸಂಗತಿಗಳನ್ನು ಮಾಡುವಂತೆ ಜನರಿಗೆ ಬೋಧಿಸುವ ಕ್ರಿಸ್ತನ ಅಧಿಕಾರವು ನಮಗಿದೆ. ರಕ್ಷಣೆಯು "ವಿಶ್ವಾಸ ಮಾತ್ರದಿಂದಲೇ" ಇರುವುದೆಂದು ಯಾವ ಅಧಿಕಾರದಿಂದ ಯಾರಾದರೂ ಬೋಧಿಸಬಹುದೋ? ನೀತಿನಿರ್ಣಯವು ವಿಶ್ವಾಸ ಮಾತ್ರದಿಂದ ಅಲ್ಲವೆಂದು ಯಾಕೋಬನು ಸ್ಪಷ್ಟವಾಗಿ ಬೋಧಿಸಿದನು (ಯಾಕೋಬ 2:24). ನಂಬಿಕೆಯಿಂದ ಮಾತ್ರವೇ ರಕ್ಷಣೆ ಎಂಬ ಬೋಧನೆಯು ಕ್ರಿಸ್ತನ ಅಧಿಕಾರಕ್ಕೆ ನೇರವಾಗಿ ವಿರುದ್ಧವಾದದ್ದಾಗಿದೆ.

## ಮುಳುಗೇಳಿಸುವ ಆಚರಣೆಗಾಗಿ ಅಧಿಕಾರ

ಮುಳುಗೇಳಿಸುವಿಕೆಯ ಬಾಪ್ತಿಸ್ಮವನ್ನು ಯಾವ ಅಧಿಕಾರದಿಂದ ನಾವು ಆಚರಿಸುತ್ತೇವೆ? ಬಾಪ್ತಿಸ್ಮದಲ್ಲಿ ನಾವು ಹೂಣಲ್ಪಟ್ಟಿದ್ದೇವೆ ಮತ್ತು ಎಬ್ಬಿಸಲ್ಪಟ್ಟಿದ್ದೇವೆ ಎಂದು ಪೌಲನ ಮುಖಾಂತರ ಪರಿಶುದ್ಧಾತ್ಮನು ಬೋಧಿಸಿದ್ದಾನೆ (ರೋಮಾಪುರ 6:3, 4; ಕೊಲೊಸ್ಸೆ 2:12). ಒಂದೇ ಬಾಪ್ತಿಸ್ಮ ಇರುವುದೆಂದು ಎಫೆಸ 4:5 ಹೇಳುತ್ತದೆ. ಇತರರು ಯಾವ ಅಧಿಕಾರದಿಂದ ಚಿಮುಕಿಸಿ ಇಲ್ಲವೇ ಸುರಿದು ಅದನ್ನು "ಬಾಪ್ತಿಸ್ಮ ವೆಂದು" ಕರೆಯುವರು? ನಿಶ್ಚಯವಾಗಿಯೂ ಅಂಥ ಆಚರಣೆಗಳಿಗೆ ಕ್ರಿಸ್ತನಿಂದ ಅಧಿಕಾರವಿರುವದಿಲ್ಲ. "ಎಲ್ಲಾ ಅಧಿಕಾರವು" ಆತನಿಗಿದೆ ಎಂಬುದನ್ನು ಜ್ಞಾಪಿಸಿ ಕೊಳ್ಳಿರಿ. ಆತನು ಅದನ್ನು ಬೋಧಿಸಿರದಿದ್ದರೆ, ಆಗ ಆದಕ್ಕೆ ದೈವಿಕ ಅಧಿಕಾರವಿರುವದಿಲ್ಲ.

## ಪಶ್ಚಾತ್ತಾಪಪಟ್ಟ ವಿಶ್ವಾಸಿಗಳಿಗೆ ಮಾತ್ರವೇ ಬಾಪ್ತಿಸ್ಮ ಹೊಂದುವುದಕ್ಕೆ ಅಧಿಕಾರ

ಪಶ್ಚಾತ್ತಾಪಪಟ್ಟ ವಿಶ್ವಾಸಿಗಳಿಗೆ ಮಾತ್ರವೇ ನಾವು ಬಾಪ್ತಿಸ್ಮ ಕೊಡುವದಕ್ಕೆ ಯಾವ ಅಧಿಕಾರವಿದೆ? ಬಾಪ್ತಿಸ್ಮಕ್ಕೆ ಮೊದಲು ವಿಶ್ವಾಸವು ಬರುವುದೆಂದು ಯೇಸುವು ಬೋಧಿಸಿದನು (ಮಾರ್ಕ 16:16). ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಜನರು ಬಾಪ್ತಿಸ್ಮ ಹೊಂದುವ ಮೊದಲು ನಂಬಿದವರೆಂದು ನಾವು ಓದುತ್ತೇವೆ (ಅಪೊಸ್ತಲರ ಕೃತ್ಯ 8:12). ಬಾಪ್ತಿಸ್ಮದ ಮೊದಲು ಮಾನಸಾಂತರವಿರುವದೆಂದು ಪೇತ್ರನು ಬೋಧಿಸಿದನು (ಅಪೊಸ್ತಲರ ಕೃತ್ಯ 2:38). ಯಾವ ಅಧಿಕಾರದಿಂದ ಕೆಲವು ಗುಂಪುಗಳು ಶಿಶುಗಳಿಗೆ ಚಿಮುಕಿಸುತ್ತಾರೆ? ಹೊಸ ಒಡಂಬಡಿಕೆಯಲ್ಲಿ ಯಾವುದಾದರೂ ಆಜ್ಞೆ ಇಲ್ಲವೇ ಉದಾಹರಣೆ ಇರುವುದೇ? ನನಗೆ ಯಾವುದೂ ತಿಳಿದಿರುವದಿಲ್ಲ. ಹಾಗಾದರೆ ಶಿಶುಗಳಿಗೆ ಚಿಮುಕಿಸುವದಕ್ಕೆ ಕ್ರಿಸ್ತನಿಂದ ಅಧಿಕಾರವು ಕೊಡಲ್ಪಟ್ಟಿರುವದಿಲ್ಲ.

## ಆರಾಧನೆಯ ಕೃತ್ಯಗಳಿಗಾಗಿ ಅಧಿಕಾರ

ಕರ್ತನ ದಿನದಂದು ನಮ್ಮ ಆರಾಧನೆಗಳಲ್ಲಿ ಹೊಸ ಒಡಂಬಡಿಕೆಯ ಕ್ರೈಸ್ತರು ದೇವರ ವಾಕ್ಯವನ್ನು ಬೋಧಿಸುವರು, ಪ್ರಾರ್ಥಿಸುವರು, ನಮ್ಮ ಆದಾಯಗಳನ್ನು ಕೊಡುವೆವು. ಕರ್ತನ ಭೋಜನದಲ್ಲಿ ಪಾಲುಗಾರರಾಗುವೆವು ಮತ್ತು ಹಾಡುವೆವು. ಈ ಸಂಗತಿಗಳನ್ನು ನಾವು ಯಾವ ಅಧಿಕಾರದಿಂದ ಮಾಡುವೆವು? ಹಾಡುವದನ್ನು ಹೊರತು ಪಡಿಸಿ ಎಲ್ಲವೂ ಅಪೊಸ್ತಲರ ಕೃತ್ಯ 2:42-47ರಲ್ಲಿ ನಮೂದಿಸಲ್ಪಟ್ಟಿರುವವು, ಮತ್ತು ಬೈಬಲಿನ ಇತರ ಸ್ಥಳಗಳಲ್ಲಿ ನಮೂದಿಸಲ್ಪಟ್ಟಿರುವುದು (ಎಫೆಸ 5:19; ಕೊಲೊಸ್ಸೆ 3:16). ವಾರದ ಮೊದಲನೆಯ ದಿನದಂದು ರೊಟ್ಟಿ ಮುರಿಯುವದನ್ನು ಅಪೊಸ್ತಲರ ಕೃತ್ಯ 20:7 ನಮೂದಿಸುತ್ತದೆ. ಯಾವ ಅಧಿಕಾರದಿಂದ ಇವುಗಳಲ್ಲಿ ಯಾವುದನ್ನು ಬಿಡಲ್ಪಡಬಹುದು? ಸಂಗೀತದ ಯಾಂತ್ರಿಕ ಉಪಕರಣಗಳಂಥೆ ಹೆಚ್ಚಾದದ್ದನ್ನು ಯಾವ ಅಧಿಕಾರದಿಂದ ಕೂಡಿಸಲ್ಪಡ ಬಹುದು? ಕ್ರಿಸ್ತನು ಅದಕ್ಕೆ ಅಧಿಕಾರ ಕೊಟ್ಟಿರುವನೋ? ಆತನು ಅದನ್ನು ಎಲ್ಲಿಯೂ ನಮೂದಿಸದೇ ಇರುವದರಿಂದ ಆತನ ಅಧಿಕಾರವು ಅದರ ಹಿಂದಿರುವದಿಲ್ಲ.

## ಮುಕ್ತಾಯ

ಯಾವ ಆಚರಣೆಯ ಹಿಂದೆ ಪರಲೋಕದ ಅಧಿಕಾರವಿರುವದಿಲ್ಲವೋ ಅದು ಮನುಷ್ಯರ ದಾಗಿರುವುದು. ನಮ್ಮ ಆಚರಣೆಗಳು ಕರ್ತನಾದ ಯೇಸುಕ್ರಿಸ್ತನ ಅಧಿಕಾರದಿಂದ ಕೊಡಲ್ಪಟ್ಟಿದೆ ಎಂಬುದರ ಬಗ್ಗೆ ನಿಶ್ಚತತೆಯುಳ್ಳವರಾಗಿರೋಣ.

© 2009 Truth for Today